SRI A. K. ABDUL SAMAD.—This X-ray machine was not functioning and it had to be inspected by the Electrician. Now, the electrician has inspected it and it is in good condition. We have posted and X-ray technician also.

ಶ್ರೀ ಡಿ. ಟಿ. ರಾಮು.—ಎಕ್ಸ್‌ರೇ ಯಂತ್ರವನ್ನು ನಡೆಸುವ ಟೆಕ್ನೀಷಯನ್ ನೇಮಕ ಮಾಡಲಾಗಿದೆಯೆ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಚನ್ನಪಟ್ಟಣಕ್ಕೆ ಪ್ರತ್ಯೇಕವಾಗಿ ನೇಮಕ ಮಾಡಿದ್ದೇವೆ.

ಶ್ರೀ ಡಿ. ಟಿ. ರಾಮು.—ಸ್ವಲ್ಪ ಕಾಲ ಸರದಿ ಮೇಲೆ ಕೆಲಸ ಮಾಡುತ್ತಿದ್ದರು. ಎಕ್ಸರೇ ಯಂತ್ರಕ್ಕೆ ಟೆಕ್ನೀಷಿಯನ್ ನೇಮಕ ಮಾಡಿಲ್ಲವೆಂದು ಹೇಳುತ್ತೇನೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಮಾಡಿದ್ದೇವೆ. We have posted one X-ray technician exclusively to Channapatna.

Starting of a Vidyapeeth at Lakkur in Malur Taluk

93. SRI P. N. REDDY (Malur).—Will the Minister for Education be pleased to state :—

(a) whether there is any proposal before the Government to start Vidyapeeth near Chikthirupati and at Lakkur in Malur Taluk ;

(b) whether the Government is aware that the records have been built up after inspecting the spot in the year 1979 ;

(c) whether the Government will start the Vidyapeeth as per the recommendations of the Directorate of Adult Education during this year ?

SRI G. B. SHANKARA RAO (Minister for Education).—

(a) There is no proposal to start a Vidyapeeth at Chikthirupati, of Lakkur Hobli in Malur Taluk.

(b) Does not arise in view of reply to Clause (a) above.

(c) No.

ಶ್ರೀ ಪಿ. ಎನ್. ರೆಡ್ಡಿ.—ವಿದ್ಯಾಪೀಠ ಸ್ಥಾಪನೆ ಮಾಡುವ ಬಗ್ಗೆ ವಯಸ್ಕರ ಶಿಕ್ಷಣ ನಿರ್ದೇಶನಾಲಯದವರು ಶಿಫಾರಸ್ಸು ಮಾಡಿದ್ದರು; ರೆವಿನ್ಯೂ ಇಲಾಖೆಯಿಂದ ಸರ್ವೆ ಕೂಡ ಆಗಿದೆ. ಉತ್ತರದಲ್ಲಿ ಜಮೀನು ಎಷ್ಟು ಎಕರೆಯೆಂದು ನಮೂದಿಸಿಲ್ಲ. ಅಧ್ಯಕ್ಷರ ಮುಖಾಂತರ ವಿದ್ಯಾಪೀಠ ವನ್ನು ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಮೇಲೆ ಪರೀಶಿಲನೆ ಮಾಡುತ್ತೇವೆನ್ನುವ ಭರವಸೆಯನ್ನು, ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ವಿದ್ಯಾಪೀಠಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಜಮೀನು ಇಲ್ಲ. ಸಮಪಾತ ಜಮೀನೂ ಇಲ್ಲ, ವಿದ್ಯುಚ್ಛಕ್ತಿ, ನೀರಾವರಿ ಸೌಕರ್ಯ ಇಲ್ಲ. ಎರಡನೆಯದಾಗಿ ೧೩ ಜಿಲ್ಲೆಗಳಲ್ಲಿ ಮಾತ್ರ ವಿದ್ಯಾಪೀಠ ಇದೆ. ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ಒಂದು ವಿದ್ಯಾಪೀಠ ಇದೆ. ಪ್ರತಿಯೊಂದು ಜಿಲ್ಲೆಯಲ್ಲೂ ವಿದ್ಯಾಪೀಠ ಸ್ಥಾಪನೆಯಾದ ಮೇಲೆ, ಕೋಲಾರ ಜಿಲ್ಲೆಗೆ ಇನ್ನೊಂದು ಪ್ರಶ್ನೆ ಬಂದಾಗ ಪರಿಶೀಲನೆ ಮಾಡಬಹುದು.